**ವ್ಯಾಖ್ಯಾನ**

# <u>ಅರ್ಭಕನ ತೊದಲ್ನುಡಿ ತಾಯ್ತಂದೆ ಕೇಳಿ</u>

ಉಗಾಭೋಗದ ಚಿಂತನೆ:

> **ಅರ್ಭಕನ ತೊದಲ್ನುಡಿ ತಾಯ್ತಂದೆ ಕೇಳಿ ಮನ**
> **ಉಬ್ಬಿ ನಲಿವಂದದಲಿ ಉರಗ ಶಯನ**
> **ಕೊಬ್ಬಿ ನಾನಾಡಿದರೆ ತಾಳಿ ರಕ್ಷಿಸುವ ಎನ್ನ**
> **ಕಬ್ಬು ಬಿಲ್ಲನಯ್ಯ ಪುರಂದರ ವಿಠಲ**

ಅರ್ಭಕ ಎಂದರೆ ಶಿಶು, ಬಾಲಕ, ತಿಳುವಳಿಕೆ ಇಲ್ಲದವ ಎಂದು ಅರ್ಥಗಳಿವೆ.

ತಂದೆ ತಾಯಿಗಳಿಗೆ ತಮ್ಮ ಮಗುವಿನ ಮಾತುಗಳೆಲ್ಲ ಮುದ್ದು ಮುದ್ದಾಗಿ ಅನಿಸುತ್ತವೆ. ಅವುಗಳನ್ನು ಕೇಳಿದಾಗ ಅಭಿಮಾನದಿಂದ, ವಾತ್ಸಲ್ಯದಿಂದ ಉಬ್ಬಿ ಸಂತೋಷಪಡುವಂತೆ ಜಗತ್ತಿನ ತಂದೆ ತಾಯಿ ಎನಿಸಿದ ಲಕ್ಷ್ಮೀ ನಾರಾಯಣರು ತಮ್ಮ ಮಕ್ಕಳು(ಭಕ್ತರು) ಮಾಡುವ ಸ್ತೊತ್ರಗಳನ್ನು ಕೇಳಿ ಸಂತೋಷಗೊಂಡು ಅನುಗ್ರಹಿಸುತ್ತಾರೆ ಎಂದು ಶ್ರೀ ಪುರಂದರ ದಾಸರು ಈ ಉಗಾಭೋಗದಲ್ಲಿ ತಿಳಿಸುತ್ತಿದ್ದಾರೆ.

ದೇವರ ಭಕ್ತರು ನಮ್ಮಂಥ ಅಲ್ಪಜ್ಞರಿಂದ ಹಿಡಿದು ಬ್ರಹ್ಮ ದೇವರವರೆಗೂ ಇದ್ದಾರೆ. ನಾವು ಮಾಡುವ ಸ್ತೋತ್ರಗಳು ತೊದಲ್ನುಡಿಗಳಾಗಿರಬಹುದು.
ಜ್ಞಾನಿಗಳಾದ ಬ್ರಹ್ಮಾದಿಗಳು ವೇದ ಮಂತ್ರಗಳಿಂದ ಸ್ತುತಿಸುತ್ತಾರೆ, ಅವೂ ಕೂಡ ತೊದಲು ನುಡಿಗಳಾ? ಎಂದರೆ ಹೌದು ಎನ್ನುತ್ತಾರೆ ಶ್ರೀ ಜಗನ್ನಾಥ ದಾಸರು.

> **"ಮಂದಜಾಸನ ಪುಳಕಪುಳಕಾನಂದಬಾಷ್ಪದ ತೊದಲ ನುಡಿಯಿಂದಿಂದಿರಾವಲ್ಲಭನ ಮಹಿಮೆ ಗಭೀರತರವೆಂದ/" (ಹರಿಕಥಾಮೃತಸಾರ)**

ಭಕ್ತಿಯ ಭಾವದಲ್ಲಿ ನಾಲಿಗೆ ತೊದಲುವುದು ಎನ್ನಬಹುದು.

ಸಾಕ್ಷಾತ್ ಸಕಲ ಶಬ್ದಮಯಿಯಾದ ಲಕ್ಷ್ಮೀದೇವಿ ಸದಾ ಲಕುಮೀಲೋಲನನ್ನು ಹಾಡಿ ಕೊಂಡಾಡುತ್ತಿರುವಾಗ,

ಮಕ್ಕಳಾದ ಬ್ರಹ್ಮಾದಿಗಳು ಮಾಡುವ ಸ್ತುತಿಗೆ ಹರಿ ನಲಿಯುತ್ತಾನೆ.

ಏಕಿರಬಹುದು? ಎಂದರೆ ಹರಿ ಕರುಣಾಮಯಿ ತನ್ನ ಭಕ್ತರು ಉದ್ಧಾರವಾಗಲಿ ಎಂದು ಕರುಣೆಯಿಂದ ಸ್ತೋತ್ರ ಕೇಳಿ ಅನುಗ್ರಹಿಸುತ್ತಾನೆ.

ಇನ್ನೊಂದು ರೀತಿಯಿಂದ ಅರ್ಥೈಸುವುದಾದರೆ,

ಶ್ರೀಹರಿಯೇ ಕೃಷ್ಣಾವತಾರದಲ್ಲಿ ನಂದ ಯಶೋದಯರ ಅರ್ಭಕನಾಗಿ ತೊದಲು ನುಡಿಗಳಿಂದ ಅವರನ್ನು ಆನಂದ ಪಡಿಸುವನು.  ಇದು ಕೂಡ ಅವರು ಮಾಡಿದ ತಪಸ್ಸಿಗೆ ಒಲಿದು ಕರುಣೆಯಿಂದ ಅವರಿಗೆ ಸಂತೋಷ ಕೊಡುತ್ತಾನೆ.

ಪ್ರಸನ್ನ ವೆಂಕಟದಾಸರು ಕೃಷ್ಣನ ತೊದಲು ನುಡಿಗಳನ್ನು ಹೀಗೆ ಹೇಳುತ್ತಾರೆ--

**“ಎತ್ತೋದೆಯಮ್ಮ ನಂಗನ್ನೆತ್ತಿಕೋ ಅಮ್ಮ ಬಲು**

**ಮತ್ತು ಅತ್ತು ಬಂದೇನೆ.  ಇತ್ತೆ ಅಮ್ಮೀ ತಿಂದೇನೆ //ಪ//**

**"ಪುತ್ರಸ್ಯ ಭಾವನಾ ಸೈವ ತದಸ್ಥತ್ವಾದ್ ಹರಿಭಾವನಾ/**

**ಪುತ್ರಸ್ಥಸ್ಯ ಹರೇ: ಪೂಜಾಂ ಕುರ್ವತ: ಪೃಥಿವೀಸ್ಥಿತಿ://(ಐತರೇಯ ಭಾಷ್ಯ)**

ಪುತ್ರನನ್ನು ಆದರಿಸುವುದು ಪುತ್ರನಲ್ಲಿ ಹರಿ ಇರುವನೆಂಬ ಅರಿವುಳ್ಳವನಿಗೆ ಹರಿಪೂಜೆ ಎಂದೆನಿಸುತ್ತದೆ.

ಕಬ್ಬುಬಿಲ್ಲನಯ್ಯ ಎಂದರೆ ಕಾಮನ ತಂದೆಯಾದ ನಾರಾಯಣ ಭಕ್ತರು ಮಾಡುವ ತಪ್ಪುಗಳನ್ನು ಕ್ಷಮಿಸುವನು.

ಎಂದು ದಾಸರು ತಿಳಿಸುತ್ತಿದ್ದಾರೆ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ